**ಸಾಕ್ಷಿಯನ್ನು ದಿನಾಂಕಃ 18-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

ನನ್ನ ಜಮೀನಿನ ಸರ್ವೆ ನಂ 66 ಇದ್ದು ಅದು ಕೋಡಿಹಳ್ಳಿಯಲ್ಲಿಇರುವುದು. ಈ ಕೇಸನ್ನು ಹವಾಬೀ ಮತ್ತು ಇಮಾಮ್ ಅಲೀ ಸಾಬ್ ಇವರು ಖರೀಂ ಸಾಬನ ಮಕ್ಕಳ ಮೇಲೆ ಹಾಕಿರುವರು. ದಾವಾ ಅಸ್ತಿಯು ಹುಸೇನ್ ಬೀ ಇವರ ಹೆಸರಿನಲ್ಲಿ ಬಹಳ ವರ್ಷಗಳ ಹಿಂದೆ ಖರೀದಿಯಾಗಿತ್ತು ನನಗೆ ಇಸವಿ ಗೊತ್ತಾಗುವುದಿಲ್ಲ. ದಾವಾ ಅಸ್ತಿಯ ಖಾತೆ ಈಗ ಹಾವಾಬೀ ಹೆಸರಿನಲ್ಲಿರುವುದು. ಹವಾಬೀ ಇವರ ವಾರಸುದಾರರೇ ಖರೀದಿ ಮಾಡಿದಾಗಿನಿಂದ ಅವರು ಸ್ವಾಧೀನದಲ್ಲಿ ಇರುವರು ಅಂದರೆ ಸರಿ.

2. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನಮ್ಮ ಜಮೀನಿನ ಹೊಲ ಬರುವುದಿಲ್ಲ ಅಂದರೆ 2 ಹೊಲ ಬಿಟ್ಟು ಇರುತ್ತದೆ. ಖರೀಂ ಸಾಬ್ ಇವರ ಮಕ್ಕಳು ಹೇಳಿದ ಕಾರಣ ನಾನು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿ. ದಾವಾ ಸ್ವತ್ತು ವಾದಿಯರಿಗೆ ಸಂಬಂದಿಸಿದ ಅಸ್ತಿ ಮತ್ತು ಅದು ಪ್ರತಿವಾದಿಯರಿಗೆ ಯಾವುದೇ ರೀತಿಯಲ್ಲೂ ಸಂಬಂದಿಸಿರುವುದಿಲ್ಲ ಎಂದು ಗೊತ್ತಿದ್ದರೂ ಸಹಿತ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯರೇ ದಾವಾ ಅಸ್ತಿಯ ಸ್ವಾಧೀನ ಅನುಭವದಲ್ಲಿ ಇರುವರು

**ಸಾಕ್ಷಿಯ ಸಹಿ** 18.12.2025

ಅಂದರೆ ಇಬ್ಬರೂ ಮಾಡುತ್ತಿರುವರು. ಇಬ್ಬರೂ ಸಾಗುವಳಿ ಮಾಡುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**18-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 18.12.2025